# ನಾಲೆಜ್ ರಿಯಾಲ್ಟಿ ಟ್ರಸ್ಟ್ ಐಪಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲೆಜ್ ರಿಯಾಲ್ಟಿ ಟ್ರಸ್ಟ್ (ಆರ್‌ಇಐಟಿ) ತನ್ನ ಯೂನಿಟ್‌ಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮಂಗಳವಾರದಿಂದ ಮುಕ್ತವಾಗಿಸಲಿದೆ. ಯೂನಿಟ್ ಬೆಲೆಯನ್ನು ₹95–100ಕ್ಕೆ ನಿಗದಿ ಮಾಡಲಾಗಿದೆ. ಮಂಗಳವಾರದಿಂದ ಗುರು-ವಾರದವರೆಗೆ ಬಿಡ್ ಸಲ್ಲಿಸಲು ಅವಕಾಶ ಇರಲಿದೆ.

‘ಒಟ್ಟು ಆಸ್ತಿ ಮೌಲ್ಯದ ಲೆಕ್ಕದಲ್ಲಿ ದೇಶದ ಅತಿದೊಡ್ಡ ರಿಯಲ್ ಎಸ್ಟೇಟ್ ಹೂಡಿಕೆ ಟ್ರಸ್ಟ್ (ಆರ್‌ಇಐಟಿ) ತನ್ನದು’ ಎಂದು ಅದು ಹೇಳಿಕೊಂಡಿದೆ.

ಸಣ್ಣ ಹೂಡಿಕೆದಾರರು ಕನಿಷ್ಠ 150 ಯೂನಿಟ್‌ಗಳಿಗೆ ಹೂಡಿಕೆ ಮಾಡಬೇಕು. ನಾಲೆಜ್ ರಿಯಾಲ್ಟಿ ಟ್ರಸ್ಟ್ ₹4,800 ಕೋಟಿ ಮೌಲ್ಯದ ಯೂನಿಟ್‌ಗಳನ್ನು ಹೊಸದಾಗಿ ಖರೀದಿಗೆ ಮುಕ್ತವಾಗಿಸುತ್ತಿದೆ.